ಅಧ್ಯಕ್ಷರು.—ಯಾರು ಮಾತನಾಡಿದ್ದೂ ರೆಕಾರ್ಡ್‌ಗೆ ಹೋಗುವುದಿಲ್ಲ. Don't record.

(ಗೊಂದಲ)

ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳ ಹಾಗೂ ಸಮವಸ್ತ್ರಗಳ ವಿತರಣೆ

೩೨ (೨೬೦) ಶ್ರೀ ಪಿ.ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ವಿದ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ೧೯೮೬-೮೭ರಲ್ಲಿ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳನ್ನು ನೀಡುವಲ್ಲಿ ವಿಳಂಬವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ೧೯೮೭-೮೮ನೇ ಸಾಲಿಗೆ ಶಾಲೆಗಳು ಪ್ರಾರಂಭವಾಗುವ ಮೊದಲೆಯಲ್ಲಿಯೇ ವಿತರಣೆ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಲು ಸರ್ಕಾರದವರು ಯೋಚಿಸಿದ್ದಾರೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಕೆಲವು ಕ್ಷೇತ್ರಗಳಲ್ಲಿ ಸ್ವಲ್ಪ ವಿಳಂಬವಾಗಿರುವುದು ನಿಜ.

ಆ) ಇದಕ್ಕಾಗಿ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ವಿದ್ಯಾ ವಿಕಾಸ ಯೋಜನೆಯಲ್ಲಿ ಸರ್ಕಾರ ಉಚಿತವಾಗಿ ಪಠ್ಯಪುಸ್ತಕಗಳು ಮತ್ತು ಸಮವಸ್ತ್ರಗಳನ್ನು ಹಂಚುತ್ತಿರುವುದು ಸರಿಯಷ್ಟೆ. ಆದರೆ ೧೯೮೬-೮೭ನೇ ಸಾಲಿನಲ್ಲಿ ಸಮಯಕ್ಕೆ ಸರಿಯಾಗಿ ಇವುಗಳನ್ನು ಹಂಚದಿರುವ ಪ್ರಯುಕ್ತ ಶಾಲಾ ಮಕ್ಕಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಷ್ಟವಾಗುತ್ತದೆ. ಆದ್ದರಿಂದ ೧೯೮೭-೮೮ನೇ ಸಾಲಿನ ಪಂಚುವಿಕೆಯನ್ನು ಮುಂಚಿತವಾಗಿ ಹಂಚಿದರೆ ಉಪಯುಕ್ತವಾಗುತ್ತದೆಂದು ವಿದ್ಯಾ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಈ ಸಾಲಿನಲ್ಲಿ ಮುಂಚಿತವಾಗಿ ಹಂಚಲು ನಾವು ಈಗಾಗಲೇ ಕ್ರಮ ಕೈಗೊಂಡಿದ್ದೇವೆ.

ಗಂಗಾ ಕಲ್ಯಾಣ ಯೋಜನೆಗಳು

೩೩ (೨೬೯) ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೬-೮೭ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾರಂಭಿಸಿದ ಗಂಗಾ ಕಲ್ಯಾಣ ಯೋಜನೆಗಳ ಸಂಖ್ಯೆ ಮತ್ತು ಒದಗಿಸಿದ ಹಣ ಎಷ್ಟು ?

ಆ) ೩೧-೦೨-೧೯೮೭ ರವರೆಗೆ ಈ ಯೋಜನೆಗಳಿಗೆ ಖರ್ಚಾದ ಹಣ ಎಷ್ಟು ?

ಇ) ಈ ಯೋಜನೆಗಳಿಂದ ನೀರಾವರಿಯಾದ ಅಚ್ಚುಕಟ್ಟು ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧) ೨೮೬ ಕೆಲಸಗಳು

೨) ೨೫೦ ಲಕ್ಷ ರೂಪಾಯಿಗಳು

ಆ) ೧೪೪.೮೫ ಲಕ್ಷ ರೂಪಾಯಿಗಳು

ಇ) ೧) ೧೦೭೧ ಹೆಕ್ಟೇರುಗಳು
೨) ೧೨೫೦ ಕುಟುಂಬಗಳು
} ಅಪೂರ್ಣವಾಗಿದ್ದ ಮುಂದುವರೆಸಿದ ಕೆಲಸಗಳು ಸೇರಿ.

ಶ್ರೀ ಬಿ. ಬಸವಲಿಂಗಪ್ಪ,—ಮಾನ್ಯ ಅಧ್ಯಕ್ಷರೇ ನಾನು ನೇರವಾಗಿ ಎರಡು ಮೂರು ಪ್ರಶ್ನೆಗಳನ್ನು ಕೇಳುತ್ತೇನೆ. ಕರ್ನಾಟಕದಲ್ಲಿ ಗಂಗಾ ಕಲ್ಯಾಣ ಯೋಜನೆ ಬಗ್ಗೆ ಸರ್ಕಾರವೇನಾದರೂ ಸಮಗ್ರವಾದ ಯೋಜನೆಯನ್ನು ಹೊಂದಿದೆಯೇ ? ಹಾಗೆ ಹೊಂದಿದ್ದರೆ ತಾವು ಈ ಯೋಜನೆಯಡಿಯಲ್ಲಿ ಎಷ್ಟು ಕೆಲಸಗಳನ್ನು ಮಂಜೂರು ಮಾಡಿದ್ದೀರಿ ? ಇದರಲ್ಲಿ ನೀವು ಖರ್ಚು ಮಾಡಿರುವುದು ಇದುವರೆಗೂ ೧೪೮.೮೫ ಲಕ್ಷ ಮಾತ್ರ. ಇನ್ನುಳಿದ ಎರಡು ತಿಂಗಳಲ್ಲಿ ಒಂದು ಕೋಟಿ ರೂ.ಗಳ ಕೆಲಸವನ್ನು ಪೂರೈಸುವುದಕ್ಕೆ ಆಗುತ್ತದೆಯೇ, ಇಲ್ಲವೇ ಹೇಳಿ ? ಆಮೇಲೆ ಒಂದು ಎಕರೆ ಗಂಗಾ ಕಲ್ಯಾಣ ಯೋಜನೆಗೆ ಎಷ್ಟು ಖರ್ಚಾಗುತ್ತದೆ ಮತ್ತು ಇತರ ನೀರಾವರಿ ಯೋಜನೆಗಳೇನಿವೆ ಅದರಲ್ಲಿ ಒಂದು ಎಕರೆಗೆ ಎಷ್ಟು ಖರ್ಚಾಗುತ್ತದೆ ? ಮತ್ತು ಇವುಗಳಿಗಿರುವ ಅಂತರ ತಿಳಿಸಿ.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಸಚಿವರು).—ಸ್ವಾಮಿ ಬಸವಲಿಂಗಪ್ಪನವರು ಕೇಳಿದ ಪ್ರಶ್ನೆ ಎಂದರೆ ನಾವು ೧೪೮ ಲಕ್ಷ ಮಾತ್ರ ಇದುವರೆಗೂ ಖರ್ಚು ಮಾಡಿದ್ದೇವೆ ಇನ್ನುಳಿದ ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ ಎಂಬುದು. ಅಂದರೆ ಈ ವರ್ಷ ೨೫೦ ಲಕ್ಷ ರೂಪಾಯಿ ಇಟ್ಟುಕೊಂಡಿದ್ದೇವೆ. ಇನ್ನು ೧೦೦ ಲಕ್ಷ ರೂಪಾಯಿ ಖರ್ಚು ಮಾಡತಕ್ಕಂತಾದ್ದು ಇದೆ. ಈ ತಿಂಗಳಲ್ಲಿ ಕೆಲವು ಕೆಲಸ ಆಗಿದೆ. ತಾವು ಕೊಟ್ಟಿರುವುದು ಇನ್ನೆರಡು ತಿಂಗಳಲ್ಲಿ ಮುಗಿಯುತ್ತದೆಂದು ಹೇಳಿದ್ದೀರಿ. ಇದಕ್ಕೆ ಪೂರ್ತಿ ಹಣವನ್ನು ಖರ್ಚು ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ನಾನು ಕೊಡುತ್ತೇನೆ. ಆವರು ಒಂದು ಎಕರೆಗೆ ಎಷ್ಟು ಖರ್ಚಾಗುತ್ತದೆಂದು ಕೇಳಿದ್ದಾರೆ. ಒಂದು ಎಕರೆಗೆ ೭೦೦೦ ರೂಪಾಯಿ ಎಂದು ಸೀಲಿಂಗ್ ಇಟ್ಟಿದ್ದೇವೆ. ಆದು ಅಷ್ಟೂ ಆಗುತ್ತಿಲ್ಲ. ಅನೇಕ ಕಡೆ ಒಂದೂವರೆ ಸಾವಿರ, ಎರಡು ಸಾವಿರ, ಎರಡೂವರೆ ಸಾವಿರ, ಮೂರು ಸಾವಿರ ರೂಪಾಯಿ ಖರ್ಚಾದ ನಿದರ್ಶನ ಕೂಡ ಇದೆ. ಲೋ ಲೈಯಿಂಗ್ ಏರಿಯಾದಲ್ಲಿ ನೀರು ಸಿಕ್ಕಿದರೆ–ಅಂದರೆ ಉದಾಹರಣೆಗೆ ಹೇಳುವುದಾದರೆ ಸೌತ್ ಕೆನರಾ, ಮಲೆನಾಡಿನಲ್ಲಿ ನೀರು ಮೇಲೆ ಇರುವುದರಿಂದ ಸ್ವಲ್ಪ ಕಡಿಮೆ ಖರ್ಚಾಗುತ್ತದೆ. ನಾವು ೭೦೦೦ ರೂಪಾಯಿ ಸೀಲಿಂಗ್ ಇಟ್ಟುಕೊಂಡಿದ್ದೇವೆ. ಇಲ್ಲಿಯವರೆಗೂ ಇದನ್ನು ಮೀರಿ ಮುಂದೆ ಹೋಗಿಲ್ಲ. ಒಂದು ಎಕರೆಗೆ ವರ್ಲ್ಡ್ ಬ್ಯಾಂಕ್‌ನಿಂದ ೩೬೦೦೦ ರೂಪಾಯಿ ಖರ್ಚು ಮಾಡಿದ್ದೇವೆ. ನಾರ್ಮಲ್ ಕೋರ್ಸ್‌ನಲ್ಲಿ ೧೨ರಿಂದ ೧೫ ಸಾವಿರ ರೂಪಾಯಿಯವರೆಗೆ ಸ್ಪೇಟ್ ಸ್ಕೀಂನಲ್ಲಿ ಖರ್ಚು ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಸಮಗ್ರವಾದಂತಹ ಯೋಜನೆಯನ್ನು ತಯಾರು ಮಾಡುತ್ತೀರಾ ಎಂದು ಮಾನ್ಯ ಬಸವಲಿಂಗಪ್ಪನವರು ಕೇಳಿದರು. ಒಟ್ಟು ೧೪೧೦ ಯೋಜನೆಗಳಿದ್ದು ಕೇಟಗರಿ ಒಂದರಲ್ಲಿ ೯೬೫ ಅನ್ನು ಐಡೆಂಟಿಫೈ ಮಾಡಿದ್ದು ಕೇಟಗರಿ ಎರಡರಲ್ಲಿ ೪೩೬ನ್ನು ಐಡೆಂಟಿಫೈ ಮಾಡಿದ್ದಾರೆ. ಇಷ್ಟೂ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ನಮ್ಮ ಇಚ್ಛೆ ಇದೆ. ಇದಕ್ಕೆ ಸುಮಾರು ೧೬ ಕೋಟಿ ರೂಪಾಯಿಗಳು ಖರ್ಚಾಗುತ್ತದೆಂದು ಅಂದಾಜು ಮಾಡಿದ್ದಾರೆ. ಇದರಿಂದಾಗಿ ಸುಮಾರು ೧೧೫೦೦ ಹೆಕ್ಟೇರ್‌ಗಳಿಗೆ ನೀರು ಕೊಡಲು ಸಾಧ್ಯವೆಂದು ಅಭಿಪ್ರಾಯ ಇದೆ. ಇದು ಈ ವರ್ಷ ಇಟ್ಟುಕೊಂಡಿರತಕ್ಕಂಥಾದ್ದು. ೨೧೫೦ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ತಮ್ಮ ಹೇಳಿಕೆ ಪ್ರಕಾರ ೫೮,೦೦೦ ರೂಪಾಯಿಗಳವರೆಗೆ ಒಂದು ಎಕರೆಗೆ ನೀರಾವರಿ ಯೋಜನೆಯಲ್ಲಿ ಖರ್ಚಾಗುತ್ತದೆಂದು ಇದೆ. ೭೦೦೦ ರೂಪಾಯಿಗಳು ಎಂದು ಮ್ಯಾಕ್ಸಿಮಮ್ ಫಿಕ್ಸ್ ಮಾಡಿದ್ದೀರಿ. ಇದರಿಂದಾಗಿ ಈ ಗಂಗಾ ಕಲ್ಯಾಣ ಯೋಜನೆಯಲ್ಲಿ ನಿಮ್ಮ ವರ್ಗದವರಿಗೆ ಮಾತ್ರ ಎಂದು ಮೀಸಲಾಗಿ ಇಟ್ಟಿದ್ದೀರಾ ? ನಿಮ್ಮ ವರ್ಗದವರು ಎಲ್ಲೆಲ್ಲಿ ಇದ್ದಾರೆ ಅಲ್ಲಿ ಮಾಡಬೇಕು. ಹಿಂದುಳಿದ ವರ್ಗದವರು ಹಾಗೂ ಎಲ್ಲಿ ಬಡವರಿದ್ದು. ಎಲ್ಲೆಲ್ಲಿಲ್ಲಿ ಭೂಮಿ ಇಟ್ಟುಕೊಂಡಿದ್ದಾರೆ ಅಂತಹವರಿಗೆ ಇಂತಹ ಒಂದು ಯೋಜನೆ ಅನ್ವಯಿಸುವುದಕ್ಕೋಸ್ಕರ ಇದನ್ನು ಪುನಃ ಪರಿಶೀಲನೆ ಮಾಡಿ ಸಮಗ್ರವಾದಂತಹ ಯೋಜನೆಯನ್ನು ತಯಾರು ಮಾಡಿ ಆವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಈ ಯೋಜನೆಯಲ್ಲಿ ಎರಡು ಭಾಗ ಮಾಡಿದ್ದೇವೆಂದು ಈಗಾಗಲೇ ಹೇಳಿದ್ದೇನೆ, ಒಂದನೇ ಕೇಟಗರಿಯಲ್ಲಿ ೧೦೦ ರಲ್ಲಿ ೭೦ ಭಾಗ ಷೆಡ್ಯೂಲ್ಡ್ ಕ್ಯಾಸ್ಟ್ ಜನರು ಇರಬೇಕು. ಇನ್ನು ಮೂವತ್ತು ಭಾಗ ಯಾವುದೇ ಸಮಾಜದವರು ಇರಬಹುದು. ಆವರಿಗೆ ಈ ಬೆನಿಫಿಟ್ ಸಿಗುತ್ತದೆ. ಈ ಸ್ಕೀಮಿನವ್ಯಾಪ್ತಿಯಲ್ಲಿ ಕೊನೇ ಪಕ್ಷ ೭೦ ಪರ್ಸೆಂಟ್ ಷೆಡ್ಯೂಲ್ಡ್ ಕ್ಯಾಸ್ಟ್ ಜನರು ಇರಬೇಕು. ಎರಡನೇ ಕೇಟಗರಿಯಲ್ಲಿ ೭೦ ಪರ್ಸೆಂಟ್ ಬ್ಯಾಕ್‌ವರ್ಡ್ ಕ್ಲಾಸ್ ಜನರು ಇರಬೇಕು.

ಇನ್ನು ಉಳಿದ ೩೦ ಪರ್ಸೆಂಟ್ ಬೇರೆ ಕಮ್ಯುನಿಟಿ ಇರಬಹುದು. ಷೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಬ್ಯಾಕ್‌ವರ್ಡ್ ಕ್ಲಾಸ್ ಜನರಿಗೆ ಹೆಚ್ಚು ಅಧ್ಯತೆ ಕೊಡಬೇಕೆಂಬ ದೃಷ್ಟಿಯಿಂದ ಮಾಡಿದ್ದೇವೆ. ಒಂದನೇ ಕೇಟಗಿರಿಯಲ್ಲಿ ಕಂಪ್ಲೀಟ್ ಆಗಿರತಕ್ಕಂಥಾದ್ದು ೧೨೫, ಒಂದನೇ ಕೇಟಗಿರಿಯಲ್ಲಿ ೯೬೫ ಸ್ಕೀಮ್ಸ್ ಇವೆ. ಎಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರು ೭೦ ಪರ್ಸೆಂಟ್ ಬರುತ್ತಾರೆ ಅಲ್ಲಿ ಈ ಯೋಜನೆ ಜಾರಿಗೆ ಬರುತ್ತದೆ. ಇನ್ನು ಳಿದ ಸ್ಕೀಮ್ಸ್ ಎಂದು ಏನು ಹೇಳಿದ್ದೇನೆ ಅದು ಕೇಟಗರಿ ಎರಡರಲ್ಲಿ ಎಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಜನರು ೭೦ ಪರ್ಸೆಂಟ್ ಇರುತ್ತಾರೆ, ಅವರಿಗೆ ಹಾಗೂ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅವರು ದುರ್ಬಲರಿದ್ದಾರೆ ಅವರಿಗೆ ವಿಶೇಷವಾಗಿ ಸಹಾಯವಾಗಲೆಂದು ಈ ಸ್ಕೀಮನ್ನು ರೂಪಿಸಿಕೊಂಡಿದ್ದೇವೆ.

ಸ್ವಾಮಿ, ಇದರ ಬಗ್ಗೆ ಇದೇ ಸಂದರ್ಭದಲ್ಲಿ ಇನ್ನೊಂದು ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಈ ಆಂತರಜಲದ ನೀರು ಎಷ್ಟು ಹೆಚ್ಚು ಹೆಚ್ಚು ಸಿಗುತ್ತದೋ ಅಷ್ಟನ್ನು ಸಹಾ ಹೆಚ್ಚು ಹೆಚ್ಚಾಗಿ ಉಪಯೋಗ ಮಾಡಿಕೊಳ್ಳಬೇಕೆಂದು ಒಂದು ಕಡೆ ಸರ್ಕಾರದ ಗಮನದಲ್ಲಿದೆ. ಈ ಸ್ಕೀಮ್‌ಗಳಲ್ಲಿ ಏನು ಮಾಡಿದ್ದೇವೆ ಎಂದರೆ ಇದುವರೆವಿಗೂ ಫಲಾನುಭವಿಗಳು ಯಾವುದೇ ಒಂದು ರೀತಿಯಾದಂಥ ಹೊರೆಯನ್ನು ಅವರು ಹೊರಬೇಕಾಗಿರಲಿಲ್ಲ. ಇದರ ಒರಿಜಿನಲ್ ಕಾಸ್ಟನ್ನು ಸರ್ಕಾರವೇ ಬೇರೆ ಮಾಡುತ್ತಿದೆ ಮತ್ತು ಮೆಯಿನ್‌ಟೆನೆನ್ಸ್ ಕಾಸ್ಟನ್ನು ಸಹ ಸರ್ಕಾರವೇ ಬರಿಸುತ್ತಿದೆ. ಕರೆಂಟ್ ಛಾರ್ಜಸ್ಸನ್ನು ಸಹ ಸರ್ಕಾರವೇ ಕಟ್ಟಿಕೊಂಡು ಬರುತ್ತಿದೆ ಇದನ್ನು ವ್ಯಾಪಕವಾಗಿ ಮಾಡಬೇಕು ಎನ್ನುವ ಒಂದು ದೃಷ್ಟಿಯಿಂದ ಇದನ್ನು ಪುನರ್‌ವಿಮರ್ಶೆ ಮಾಡಬೇಕಾಗಿದೆ. ಇಲ್ಲಿ ಫಲಾನುಭವಿಗಳು ಏನು ಇದ್ದಾರೆ ಅವರು ಸ್ವಲ್ಪಮಟ್ಟಿಗೆ ಈ ಮೆಯಿನ್‌ಟೆನೆನ್ಸ್ ಕಾಸ್ಟ್‌ನ ಹೊರೆಯನ್ನು ಹೊತ್ತುಕೊಳ್ಳಬೇಕಾಗಿ ಬರಬಹುದು. ಸರ್ಕಾರ ಇದರ ಬಗ್ಗೆ ವ್ಯಾಪಕವಾದ ಕಾರ್ಯಕ್ರಮವನ್ನು ಕೈಗೊಂಡಿದೆ. ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ವ್ಯಾಪಕವಾಗಿ ಇನ್ನು ಹೆಚ್ಚು ಹೆಚ್ಚು ಬಡವರು ಎಲ್ಲಿದ್ದಾರೆ ಅಂಥ ಕಡೆ ಇದನ್ನು ವಿಸ್ತರಣೆ ಮಾಡಬೇಕು ಎಂದು ಹೇಳಿದ್ದಾರೆ. ಸನ್ಮಾನ್ಯ ಎಂ. ಪಿ. ಪ್ರಕಾಶ್‌ರವರು ಸಹ ಇದೇ ಪ್ರಶ್ನೆಯನ್ನು ಕೇಳಿದ್ದಾಗ ಇದರ ಬಗ್ಗೆ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇನ್ನು ಸಣ್ಣ ಹಿಡುವಳಿದಾರರ ಬಗ್ಗೆ ಈಗಾಗಲೇ ಇರ್ರಿಸ್ಪೆಕ್ಟಿವ್ ಆಫ್ ದಿ ಕ್ಯಾಸ್ಟ್ ಇದರಲ್ಲಿ ಬಡವರು ಯಾರಾದರೂ ಇರಲಿ, ಜಾತಿ ಒಂದನ್ನೇ ಮಾಡದೇ ಬೇರೆ ಬೇರೆ ವರ್ಗದವರಿಗೆ ವ್ಯಾಪಕವಾಗಿ ವಿಸ್ತರಣೆ ಮಾಡಬೇಕು, ಇದರ ಬಗ್ಗೆ ಸರ್ಕಾರವು ಅತ್ಯಂತ ಶೀಘ್ರವಾದ ನಿರ್ಣಯವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಬಯಸುತ್ತೇನೆ.

ಅಧ್ಯಕ್ಷರು.—ಪಾಟೀಲರೇ ತಮ್ಮ ಪ್ರಶ್ನೆ.....

ಶ್ರೀ ಬಸವಲಿಂಗಪ್ಪ.—ಅಧ್ಯಕ್ಷರೇ, ಒಂದೇ ಒಂದು ಕೊನೆಯ ಪ್ರಶ್ನೆ. ಶ್ರೀಮಾನ್ ದೇವೇಗೌಡರಿಗೂ ನನಗೂ ತಾತ್ವಿಕವಾದ ವ್ಯತ್ಯಾಸ ಬಹಳ ಪರ್ಷಗಳಿಂದ ನಡೆಯುತ್ತಿದೆ. ಒಂದು ಪಾಪ ಎಂದರೆ ಈ ಕರ್ನಾಟಕ ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ನಾವು ಮಾಡಿದ್ದೇವೆ. ಯಾರ್‍ಯಾರು ಚಾಸ್ತಿ ಹಿಡುವಳಿದಾರರು ಇದ್ದಾರೆ ಅವರಿಗೆ ಮಾತ್ರ ಅನುಕೂಲವಾಗುತ್ತಿದೆ. ಈ ಖಿಷ್ಕಿ ಭೂಮಿಯಲ್ಲಿ ಬೇಸಾಯ ಮಾಡುತ್ತಿರುವವರು ಯಾರು ಇದ್ದಾರೆ, ಬರೀ ಪಾಳೆಯ ಆಧಾರದ ಮೇಲೆ ಮಾಡುತ್ತಿದ್ದಾರೆ. ಅಂಥವರಿಗೆ ಕೆಲವರಿಗೆ ಮಾತ್ರ ಇದರಿಂದ ಅನುಕೂಲವಾಗಿ ಖಿಷ್ಕಿ ಭೂಮಿಯಲ್ಲಿ ಬೇಸಾಯ ಮಾಡುತ್ತಿರುವವರಿಗೆ ಆಗುತ್ತಿಲ್ಲ. ಆದ್ದರಿಂದ ಮೂರು ಕೋಟಿ ಎಕರೆ ಜಮೀನು ಇರತಕ್ಕಂಥ ಈ ರಾಜ್ಯದಲ್ಲಿ ನಮಗೆ ನೀರಾವರಿ ಯೋಜನೆ ಅನ್ವಯಿಸತಕ್ಕಂಥದ್ದು ಕೇವಲ ೨೫ ಪರ್ಸೆಂಟ್ ಮಾತ್ರ ಪಾಳೆ ಆಧಾರವನ್ನೇ ನಂಬಿಕೊಂಡಿರುವವರ ಬಗ್ಗೆ ಕೇಳುತ್ತಿದ್ದೇನೆ. ಇದನ್ನು ತಾರತಮ್ಯ ಭಾವನೆ ಎಂದು ನಾನು ಹೇಳುವುದಿಲ್ಲ. ಯಾರು ಭೂಮಿಯ ಹಿಡುವಳಿದಾರರು ಇದ್ದಾರೆ, ನೀರಾವರಿ ಯೋಜನೆ ಕೆಳಗೆ ಅಂಥವರಿಗೆ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಿ ಅನುಕೂಲಸ್ಥರನ್ನಾಗಿ ಮಾಡಿದ್ದೇವೆ. ಖಿಷ್ಕಿಯವರಿಗೆ ಮಾಡುವುದಕ್ಕೆ ಎಂದೂ ಪ್ರಯತ್ನ ಮಾಡಿಲ್ಲ: ಆದ್ದರಿಂದ ಇಂಥ ಯೋಜನೆಯನ್ನು ನಾವು ಹೆಚ್ಚು ಹೆಚ್ಚು ರೂಪದಲ್ಲಿ ಬಡವರಿಗೆ ಎರಡು ಎಕರೆ ಮೂರು ಎಕರೆ ನಾಲ್ಕು ಎಕರೆ ಇಟ್ಟುಕೊಂಡಿರು ಯಾರು ಇದ್ದಾರೆ ಅಂಥವರಿಗೆ ಇಂಥ ಒಂದು ಯೋಜನೆಯನ್ನು ವಿಸ್ತರಿಸಲಿಕ್ಕೆ ನೀವು ಶ್ರಮಿಸುತ್ತೀರಾ ? ಮತ್ತು ಪ್ರಯತ್ನ ಮಾಡುತ್ತೀರಾ ? ಈ ಉದ್ದೇಶವನ್ನು ಇಟ್ಟುಕೊಂಡು ಸಾಧನೆಯನ್ನು ಮಾಡಲಿಕ್ಕೆ ವಿಶಾದರೂ ಒಂದು ಮನಸ್ಸನ್ನು ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಅಧ್ಯಕ್ಷರೇ, ಬಸವಲಿಂಗಪ್ಪನವರಿಗೂ ನನಗೂ ವ್ಯತ್ಯಾಸ ಇಲ್ಲವೇ ಇಲ್ಲ. ಮಾನ್ಯ ಬಸವಲಿಂಗಪ್ಪನವರಿಗೆ ವ್ಯತ್ಯಾಸ ಬರಬಾರದು ಎಂದೇ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನಾನು ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಂಡ ಮೇಲೆ ಎಲ್ಲೆಲ್ಲಿ ಜಲಾಶಯಗಳನ್ನು ಕೆರೆಗಳನ್ನು ನಿರ್ಮಾಣ ಮಾಡಲಿಕ್ಕೆ, ನೀರು ಕೊಡಲಿಕ್ಕೆ ಸಾಧ್ಯವಿಲ್ಲವೋ ಅಂಥ ಕಡೆ ಸರ್ಕಾರವು ವಿಶೇಷ

ವಾದ ಶೀರ್ಮಾನವನ್ನು ತೆಗೆದುಕೊಂಡಿದೆ. ಇನ್ನು ಸಮಾಜಕ್ಕೊಕ್ಕರ ಹೆಚ್ಚು ಉಪಯೋಗ ಆಗಲಿ ಎಂದು ಈ ಯೋಜನೆಯನ್ನು ರೂಪಿಸಿದ್ದೇವೆ. ಇದರಿಂದ ನಿಮ್ಮ ಮನಸ್ಸಿನ ಆತಂಕ ಕಳಕಳಿ ಉಳಿಯುವುದಿಲ್ಲ, ನಿವಾರಣೆ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸ್ವಾಮಿ, ಮಾನ್ಯ ಎಂ. ಪಿ. ಪ್ರಕಾಶ್‌ರವರ ಪ್ರಶ್ನೆ ಬಂದಾಗ ಇದನ್ನು ರೆಫರ್ ಮಾಡಿದ್ದೇನೆ. ರಾಜ್ಯದಲ್ಲಿ ಎಲ್ಲೆಲ್ಲಿ ದೊಡ್ಡ ಜಲಾಶಯಗಳಿಂದ ಮಧ್ಯಮ ಜಲಾಶಯಗಳಿಂದ ನೀರು ಕೊಡಲಿಕ್ಕೆ ಸಾಧ್ಯವಿಲ್ಲವೋ ಅಂಥ ಕಡೆ ಭೂಮಿಯಲ್ಲಿ ನಮಗೆ ಹೆಚ್ಚು ಹೆಚ್ಚು ನೀರು ಎಲ್ಲೆಲ್ಲಿ ಸಿಗುತ್ತದೆಂದು ನಮಗೆ ಗೋಚರವಾಗುತ್ತದೋ ಮತ್ತು ತಜ್ಞರು ಕೊಡತಕ್ಕಂಥ ವರದಿಯ ಆಧಾರದ ಮೇಲೆ ಸಿಗತಕ್ಕಂಥ ಭೂಗರ್ಭದ ಜಲವನ್ನು ಖುಷ್ಕಿ ಬೆಳೆಯನ್ನು ಯಾರು ಬೆಳೆಯುವರು ಇದ್ದಾರೆ, ಅಂಥವರಿಗೆ ಅನುಕೂಲ ಮಾಡಲಿಕ್ಕೆ ಈ ಸ್ಕೀಮನ್ನು ವಿಸ್ತರಣೆ ಮಾಡಬೇಕು ಎಂದು ನಮ್ಮ ಅಭಿಪ್ರಾಯ ಏನು ಇದೆ, ಅದನ್ನು ಮಾಡುತ್ತೇವೆಂದು ಮಾನ್ಯ ಸದಸ್ಯರಾದ ಶ್ರೀ ಎಂ. ಪಿ. ಪ್ರಕಾಶ್‌ರವರಿಗೂ ಸಹಾ ಹೇಳಿದ್ದೇನೆ. ಇದರ ಬಗ್ಗೆ ಸರ್ಕಾರಿ ಆಜ್ಞೆಯನ್ನು ಹೊರಡಿಸುವವರಿದ್ದೇವೆ.

ಅಧ್ಯಕ್ಷರು.—ಪಾಟೀಲರೇ, ತಮ್ಮ ಪ್ರಶ್ನೆಯನ್ನು ಮುಂದೂಡಲಾಗಿದೆ. ಕಾಣಡೆಯವರೇ ನಿಮ್ಮ ಪ್ರಶ್ನೆ ಕೇಳಿ.

ಸರಕಾರಿ ಮುದ್ರಣಾಲಯದ ಕೆಲಸಗಾರರ ವಿರುದ್ಧ ಕೈಕೊಂಡ ಕ್ರಮ

೩೫೫ (ಜೆ ಎ) ಶ್ರೀ ಗೋಪಾಲ ಮುಕುಂದ ಕಾಣಡೆ (ಪಿರ್ಸಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ :—

ಬೆಂಗಳೂರಿನ ಸರ್ಕಾರಿ ಮುದ್ರಣಾಲಯದಲ್ಲಿನ ಕೆಲಸಗಾರರ ಗೈರು ಹಾಜರಿಯ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದ್ದರೂ ಈ ವರೆವಿಗೂ ಯಾವ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಈ ಪ್ರಕರಣದಲ್ಲಿ ಸಿ. ಒ. ಡಿ. ಯಿಂದ ತನಿಖೆ ನಡೆಸಿ ತನಿಖಾ ವರದಿಯನ್ನು ಪಡೆಯಲಾಗಿದೆ. ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳಲು ಈಗಾಗಲೇ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಶ್ರೀ ಗೋಪಾಲ ಮುಕುಂದ ಕಾಣಡೆ.—ಈ ಪ್ರಶ್ನೆಯು ಉತ್ತರವಾಗಿ ಈ ಪ್ರಕರಣದಲ್ಲಿ ಸಿ.ಒ.ಡಿ. ಯಿಂದ ತನಿಖೆ ನಡೆಸಿ ತನಿಖಾ ವರದಿಯನ್ನು ಪಡೆಯಲಾಗಿದೆ. ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳಲು ಈಗಾಗಲೇ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಹೇಳಿದ್ದೀರಿ. ಆ ತನಿಖೆಯ ರಿಪೋರ್ಟ್ ಏನು ಇದೆ ಅದನ್ನು ಈ ಸದನಕ್ಕೆ ಒಪ್ಪಿಸಬೇಕು ಮತ್ತು ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಈ ಬಗ್ಗೆ ಏನು ಅಪಾಧನೆ ಮಾಡಿದ್ದಾರೆ ಅದರ ಬಗ್ಗೆ ತನಿಖೆಯಾಗಿ ಆ ವರದಿ ಸರ್ಕಾರಕ್ಕೆ ಡಿಸೆಂಬರ್‌ನಲ್ಲಿ ಬಂತು. ಅದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೋ ಯಾರ್ಯಾರ ಮೇಲೆ ಏನೇನು ಡಿಸ್ಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕೋ ಮತ್ತು ಏನು ಮಾಡಬೇಕು ಅನ್ನುವುದನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಗೋಪಾಲ ಮುಕುಂದ ಕಾಣಡೆ.—ಇದರಲ್ಲಿ ಯಾರ್ಯಾರು ತಪ್ಪಿತಸ್ಥರು ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಡಿ. ಮಂಜುನಾಥ್.—ಆ ವಿವರಣೆಯನ್ನು ಈಗ ಹೇಳಬೇಕಾಗಿಲ್ಲ. ಈಗ ಅವರು ಪ್ರಿಲಿಮಿನರಿ ರಿಪೋರ್ಟ್ ಅನ್ನು ನಮಗೆ ಕಳುಹಿಸಿದ್ದಾರೆ. ಆ ವರದಿಯನ್ನು ನೋಡಿ ತನಿಖೆ ಮಾಡಿ ಆನಂತರ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಗೋಪಾಲ ಮುಕುಂದ ಕಾಣಡೆ.—ಮಾನ್ಯ ಅಧ್ಯಕ್ಷರೆ, ಅವರು ಸರಿಯಾಗಿ ಉತ್ತರ ಹೇಳಿಲ್ಲ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರಲ್ಲ.

ಶ್ರೀ ಗೋಪಾಲ ಮುಕುಂದ ಕಾಣಡೆ.—ಅದು ಹಾರಿಕೆಯ ಉತ್ತರವಾಯಿತು. ಉತ್ತರವನ್ನು ಸಮರ್ಪಕವಾಗಿಯೇ ಹೇಳಿದ್ದೇನೆ. ಸರ್ಕಾರೀ ಮುದ್ರಣಾಲಯದಲ್ಲಿ ೭೭೪ ಮಂದಿಗೆ ೨೦ ಮಂದಿ ಬಂದಿದ್ದಾರೆಂದು, ಪಂಚ್ ಮಾಡಿದ್ದಾರೆ. ಈ ಬಗ್ಗೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ ?